

# ನೀಲಿನೋಕಗಿನ ಮಂಜು

■ ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ಮಣ್ಣಿನ ಹಂಬಲ, ಮಣ್ಣಿಗಾಗಿ ಕೋಲಾಹಲ

ಶೆಟ್ಟರು ಮಾತನಾಡಲಿಲ್ಲ. ಸರೋಜಾಳಿಗೆ ಅದಕ್ಕೆ ಹೇಗೆ ಪ್ರತಿಕ್ರಿಯೆ ನೀಡಬೇಕು ಎಂದು ತಿಳಿಯದಾಯಿತು. ಆಕೆಯಲ್ಲಿ ಮೊನ್ನೆ ನಡೆದ ಘಟನೆಯಿಂದ ಇಲ್ಲಿಂದ ಹೋಗಬೇಕೆಂಬ ಇರಾದೆ ಇದ್ದರೂ ಮತ್ತೆ ರಾಂಪುರಕ್ಕೆ ಹೋಗುವುದು ಎಷ್ಟು ಸರಿ? ರಾಂಪುರಕ್ಕೆ ಹೋದರೆ ಹಿರಿಯಮ್ಮನ ಚಾಳಿ ಮನೆಮಕ್ಕಳಿಗೆಲ್ಲ ಎಂಬಂತೆ ರಾಯರು ಮತ್ತೆ ಜಯಂತಿ ಕುಲಕರ್ಣಿಯವರ ಮನೆಯಲ್ಲೇ ಬಿದ್ದು ಸತ್ತರೆ? ಎನ್ನುವುದು ಮುಂದೆ ಬಂತು. ಈ ಗೊಂದಲದಲ್ಲಿ, ಆಕೆ ತನ್ನ ಬದುಕು ಹಾಳಾಗಿ ಹೋಯ್ತು ಎಂದು ದೊಡ್ಡದಾಗಿಯೇ ಗುಣುಗುಣಿಸಿಕೊಂಡು ಅಡುಗೆ ಮನೆ ಹೊಕ್ಕರು.

ಶೆಟ್ಟರು 'ಬರ್ತೇನೆ, ನಾಳೆ ಬೆಳಗ್ಗೆ ನೋಡೋಣ' ಎಂದು ಹೊರಟುಹೋದ ಕೂಡಲೇ ಮತ್ತೆ ಚಾವಡಿಗೆ ಬಂದ ಸರೋಜಾಳನ್ನು ರಾಯರು – 'ಅಣ್ಣನ ಫೋನು ಬಂದಿತ್ತು ಅಂದೆಯಲ್ಲ. ಏನಂತೆ ವಿಶೇಷ?' ಎಂದು ಪ್ರಶ್ನಿಸಿದರು. ಆಕೆ 'ಅಣ್ಣ ಪತ್ರಿಕೆ ನೋಡಿ ನಮ್ಮಾಚೆ ಬರಬೇಕು ಎಂದುಕೊಂಡಿದ್ದನಂತೆ. ಆದರೆ ಅವನಿಗೆ ನಿನ್ನೆಯಿಂದ ಸ್ವಲ್ಪ ಜ್ವರ ಇದೆಯಂತೆ. ಅದಕ್ಕಿಂತಲೂ ಮುಖ್ಯವಾಗಿ ಅವನ ನೆರೆಯ ಸ್ನೇಹಿತರೊಬ್ಬರು ನಿಧನರಾದದ್ದು ಅವನಿಗೆ ಗಾಢ ನೋವು ಕೊಟ್ಟಿದೆಯಂತೆ' ಎಂದು ಹೇಳಿ, 'ಸಂಜೆ ನಾವು ಅಣ್ಣ ಇದ್ದಲ್ಲಿಗೆ ಹೋಗಿ ಬಂದರೆ ಹೇಗೆ? ಹೋಗುವುದಾದರೆ ಹೇಳಿ, ನಾನು ರೆಡಿ' ಎಂದರು.

ರಾಯರು 'ಹೌದಾ?' ಎಂದು ಪ್ರಶ್ನಿಸಿ, 'ನಿನ್ನ ಅಣ್ಣ ಎಲ್ಲಾ ಅರ್ಥದಲ್ಲೂ ನಿನಗೆ ನೈತಿಕ ಬೆಂಬಲ ಕೊಟ್ಟ ಮನುಷ್ಯ. ಈಗ ಒಬ್ಬರೇ ಇರುವುದಲ್ಲವಾ? ಪಕ್ಕದ ಮನೆಯ ಯಾರೋ ಕುಡುಬಿಯೊಬ್ಬರನ್ನು ಅವರು ಗಾಢವಾಗಿ ಹಚ್ಚಿಕೊಂಡದ್ದರಿಂದಲೇ ಅವರು ಯಾವತ್ತೂ ಲವಲವಿಕೆಯಲ್ಲಿ ಇದ್ದರು ಎಂದು ನನಗೆ ಅನಿಸುತ್ತಿತ್ತು. ಈಗ ಆ ಕುಡುಬಿಯೇ ನಿಧನರಾಗಿದ್ದರಿಂದ ಸ್ವಲ್ಪ ಆತಂಕ ನಿನ್ನ ಅಣ್ಣನಿಗೆ ಆಗಿರಬಹುದು! ಅಂದಹಾಗೆ, ನಿಧನರಾದವರು ಗಿರಿಯಗೌಡ ಇರಬೇಕಲ್ಲ?' ಎಂದು ರಾಯರು ಪತ್ನಿಯನ್ನು ಪ್ರಶ್ನಿಸಿದರು.

ಸರೋಜಮ್ಮ 'ಹೌದು ಗಿರಿಯಗೌಡನೇ' ಅಂತ ಅಂದಳು. ಆತ ತುಂಬಾ ಅಪರೂಪದ ವ್ಯಕ್ತಿಯಂತೆ. ನಿಮಗೂ ಗೊತ್ತಿದೆ ಅಂತ ಆಯ್ತು ಎಂದು ಹೇಳಿ 'ಈಗೇನು ಮಾಡೋಣ ನಾವು? ಸಂಜೆಯೇ ಹೋಗೋದಾ? ಅಥವಾ ನಾಳೆಯಾ?' ಎಂದು ಪ್ರಶ್ನಿಸಿದರು.

'ನಾಳೆ ಯಾಕೆ? ಈ ದಿನವೇ ಹೊರಡೋಣ. ಮೊದಲು ಸ್ನಾನ ತೀರಿಸಿ ಬರುತ್ತೇನೆ' ಎಂದು ರಾಯರು ಸ್ನಾನದ ಮನೆಗೆ ಹೋಗಿ ಸ್ನಾನ ತೀರಿಸಿ ಬರುವಷ್ಟರಲ್ಲಿ ಸರೋಜಮ್ಮನ ತಿಂಡಿ ರೆಡಿಯಾಗಿತ್ತು.

ರಾಯರು ಉಪಾಹಾರಕ್ಕಾಗಿ ಡೈನಿಂಗ್ ಟೇಬಲ್ಲಿನ ಇದಿರು ಕುಳಿತರು. ಮನೆಯಲ್ಲಿ ಗೆಸ್ಟ್‌ಗಳು ಇಲ್ಲದಿದ್ದರೆ ಅವರು ಊಟ ತಿಂಡಿಯನ್ನು ಯಾವತ್ತೂ ಅಲ್ಲಿ ಕುಳಿತು ಮಾಡುತ್ತಿರಲಿಲ್ಲ. ನೆಲದಲ್ಲೇ ಚಕ್ಕಳಮಕ್ಕಳ ಕುಳಿತು ತಿನ್ನುವುದು ಉಣ್ಣುವುದು ಅಂದರೆ ಅವರಿಗೆ ಇಷ್ಟ. ಡೈನಿಂಗ್ ಟೇಬಲ್ಲಿನ ಸಹವಾಸ ಮಾಡಿದರೆ, ಮತ್ತೆ ನೆಲದಲ್ಲಿ ಕುಳಿತುಕೊಳ್ಳಲಿಕ್ಕೆ ಆಗುವುದಿಲ್ಲ ಎನ್ನುವುದು ಅವರ ಅಂಬೋಣ. ಹಾಗೇ ನೆಲದಲ್ಲಿ ಕುಳಿತುಕೊಂಡು ತಿನ್ನುವುದರಿಂದ ಆಗುವ ಲಾಭವೇನು ಎಂದು ಯಾರಾದರೂ ಅವರನ್ನು ಕೇಳಿದರೆ ಅವರು ಅದರ ಲಾಭವನ್ನು ಉಪದೇಶಿಸಿದ್ದೂ ಉಂಟು. ಆದರೆ ಮೊಣಗಂಟು ನೋವಿನಿಂದ ತಪ್ಪಿಯೂ ನೆಲದಲ್ಲಿ ಕುಳಿತುಕೊಳ್ಳಲಾಗದ ಸರೋಜಮ್ಮ – 'ಅವರ ಉಪದೇಶ ಅವರಿಗೆ ಮಾತ್ರ. ನನಗಲ್ಲ! ನನಗೆ ಅದು ಬೇಡವೇ ಬೇಡ' ಎಂಬಂತೆ ರಾಯರನ್ನು ಲೇವಡಿ ಮಾಡುತ್ತಾ ರಾಯರನ್ನೂ ಅವರ ಸ್ನೇಹಿತರನ್ನೂ ನಗಿಸುತ್ತಿದ್ದುದುಂಟು. ರಾಯರು ಸರೋಜಮ್ಮ ಬಡಿಸಿದ ಬಿಸಿ ಬಿಸಿ ಉದ್ದಿನ ದೋಸೆಯನ್ನು ತೆಂಗಿನಕಾಯಿ ಚಟ್ನಿಯಲ್ಲಿ ಮುಳುಗಿಸಿ ಬಾಯಿಗೆ ಇಡಬೇಕು ಎನ್ನುವಷ್ಟರಲ್ಲಿ ರಾಯರ ಅಂಗಳದಲ್ಲಿ ಬುಲೆಟ್ ಬೈಕ್ ಬಂದು ನಿಂತ ಶಬ್ದ ಕೇಳಿಸಿತು. ರಾಯರು 'ಸರೋಜ, ಅದು ಯಾರಿರಬಹುದು ನೋಡು' ಎಂದು ಕುತೂಹಲದಲ್ಲಿ ಹೇಳುವಷ್ಟರಲ್ಲಿ ಸರೋಜ, 'ನೋಡಿ ಬರುತ್ತೇನೆ' ಎಂದು ಚಾವಡಿಯಾಚೆ ನಡೆದರು.

ಸರೋಜ ಬಾಗಿಲಲ್ಲಿ ನಿಂತು ಎಸ್.ಐ. ಶಿವರಾಮ ಶೆಟ್ಟರನ್ನು ನಿಧಾನವಾಗಿ ಗುರುತು ಹಿಡಿದು 'ಬನ್ನಿ ನಮಸ್ಕಾರ' ಎಂದು ಸ್ವಾಗತಿಸುತ್ತಿದ್ದಂತೆ, 'ನಮಸ್ಕಾರ ಸರೋಜಕ್ಕ, ಹೇಗಿದ್ದೀರಿ?' ಎಂದು ಬಾಯ್ತುಂಬ ನಗು ತುಂಬಿಕೊಂಡು ಒಳಗೆ ಬಂದ